ಕಥೋಪದೇಶ

ಭಯದಿಂದ ನಿಜವಾದ ಭಕ್ತಿಗೆ ಹಾನಿ

ಒಂದು ಬಾರಿ ಏಸುಕ್ರಿಸ್ತನು ನಡೆದು ಹೋಗುತ್ತಿದ್ದ ದಾರಿಯಲ್ಲಿ ದುರ್ಬಲರಾಗಿದ್ದ ಮೂವರನ್ನು ಕಂಡು, "ನೀವೇಕೆ ಇಷ್ಟು ದುರ್ಬಲರಾಗಿದ್ದೀರಿ?" ಎಂದು ಪ್ರಶ್ನಿಸಿದ. "ಬೆಂಕಿಯ ಭಯದಿಂದ" ಎಂದು ಅವರು ಉತ್ತರಿಸಿದರು. ಏಸು ಹೇಳಿದ, "ಬಹಳ ಆಶ್ಚರ್ಯವಾಗಿದೆಯಲ್ಲ! ಭಗವಂತನಿಂದ ಸೃಷ್ಟಿಯಾಗಿರುವ ಈ ಬೆಂಕಿಯ ಭಯ ನಿಮಗೇಕೆ? ಭಗವಂತನು ಎಲ್ಲರನ್ನೂ ಕಾಪಾಡುತ್ತಾನೆ. ಆದ್ದರಿಂದ ಭಯ ಬಿಟ್ಟು ಅವನ ಸ್ಮರಣೆ ಮಾಡಿ."

ಅಲ್ಲಿಂದ ಮುಂದೆ ನಡೆಯುತ್ತಿದ್ದಂತೆ ಇನ್ನೂ ಕೃಶವಾಗಿದ್ದ ಮೂವರನ್ನು ಕಂಡ. ಅವರ ಮುಖದ ಕಳೆಯೇ ಕುಂದಿಹೋಗಿತ್ತು. "ನೀವು ಹೀಗೇಕೆ ಆಗಿರುವಿರಿ?" ಎಂದು ಏಸು ಕೇಳಿದಾಗ, ಅವರು ಉತ್ತರಿಸಿದರು, "ನಾವು ಸ್ವರ್ಗವನ್ನು ಬಯಸುತ್ತಿರುವೆವು. ಆದ್ದರಿಂದ ಹೀಗಿರುವೆವು." ಏಸು ಹೇಳಿದ, "ಭಗವಂತನನ್ನು ಕುರಿತು ಧ್ಯಾನ ಮಾಡಿದರೆ ಅವನು ಎಲ್ಲವನ್ನೂ ನೀಡುವನು. ಸ್ವರ್ಗ ಸಿಗಲಾರದು ಎಂಬ ಭಯವನ್ನು ಬಿಟ್ಟು ಅವನನ್ನು ಸ್ಮರಿಸಿ."

ಮತ್ತೆ ಮುಂದೆ ಹೋಗುತ್ತಿದ್ದಂತೆ ದುರ್ಬಲರಾಗಿದ್ದರೂ ತೇಜಸ್ವಿಗಳಾಗಿದ್ದ ಮೂವರನ್ನು ಎದುರುಗೊಂಡ. ಏಸು ಕೇಳಿದ, "ನೀವು ತೇಜಸ್ವಿಗಳಾಗಿದ್ದರೂ ಯಾವುದೋ ಭಯದಿಂದ ದುರ್ಬಲರಾಗಿದ್ದೀರಿ. ನಿಮಗೆ ಯಾವ ಭಯ?" ಅವರು ಉತ್ತರಿಸಿದರು,"ಪ್ರಭುವನ್ನು ಪ್ರೀತಿಸುವವರು ನಾವು. ಅದು ಕ್ಷೀಣಿಸಬಹುದು ಎಂಬುದೇ ನಮ್ಮ ಭಯ." ಏಸುಕ್ರಿಸ್ತ ಹೇಳಿದ, "ನೀವು ಅವನಿಗೆ ಅತ್ಯಂತಸಮೀಪದಲ್ಲಿದ್ದೀರಿ. ನಿಮಗೆ ಅವನ ದರ್ಶನವಾಗುವುದು. ಆದರೆ ಭಯದಿಂದ ಭಕ್ತಿಯ ಹಾನಿಯಾಗುತ್ತದೆ. ನಿರಾಸೆ, ದುಃಖ ಉಂಟಾಗುತ್ತದೆ. ಭಯವನ್ನು ಬಿಟ್ಟು ಅವನನ್ನು ನಿರ್ಮಲಚಿತ್ತರಾಗಿ ಪ್ರೀತಿಸಿ." ✡